Concessions to the Ryots of Karnataka

584 SRI SREERNALY CHANDRASHEKAR (Hosanagar).—Will the Chief Minister be pleased to state.—

(a) whether demands of the Ryots of Karnataka have been met by the Government and if so, what are those (details to be furnished);

(b) whether it is a fact that the Government has given concession to the Formers of Karnataka to the tune of Eight Crores ;

(c) whether the Shvetapatra have been published in this regard ;

(d) whether it is a fact that eventhough the Government has given lot of concessions to Farmers, they are still agitating ;

(e) whether any fresh demands have been received from the Farmers ?

SRI R. GUNDU RAO (Chief Minister). –(a) The Government have met several demands of the Farmers and the details are as per Annexure-I.

(b) Yes.

(c) Yes.

(d) No.

(e) No.

ANNEXURE-I

The following are the demands of the Farmers which have been accepted by the Government and necessary orders have been issued for the implementation of the same.

1. Support Price has been fixed for the major Crops grown in Karnataka and it is as follows.—

(a) Paddy Fine Rs. 120 Medium Rs. 118 Course Rs. 115	... per quintal + Rs. 10 per quintal as Bonus by State Government
(b) Ragi	... Rs. 116 per quintal +Rs. 9 as Bonus
(c) Maize	by State Government
(d) Jowar	
(e) Groundnut	... Rs. 250 per quintal
(f) Sugar Cane Rs 170-20 Rs. 240-20	... per tonne depending upon Sugar recovery percentage

2. Exemption has been granted for Land revenue assessment on dry land holding upto and not exceeding 4 hectares and an equivalent of rainfed wet land and recovery of Rupees one per holding towards maintenance of the Records of rights.

3. The betterment levy stands abolished.

4. The water Rates were revised and refixed.

5. The Purchase tax on sugarcane delivered at any sugar factory employing the vaccum pan progress should stand reduced to Rs. 12 per tonne.

6. Installations of meters for all I.P. Sets upto and inclusive of sanctioned loan of H.P. shall be discontinued. Meters will be installed above 10 H.P. Further that the tariff applicable in respect of sanctioned loads upto and inclusive of 10 H.P. I.P. Sets shall be at Rs. 50 per H.P. per year, payable in quarterly instalments.

7. There will be a one time charge of Rs. 300 at the time of Registration in the case of tractors and trailers and an annual tax of Rs. 10 will have to be paid to Motor Vehicles Department.

8, Agricultural income tax on all crops except irrigated Commercial Crops and Plantation Crops has been abolished.

9. Blanket stay on recovery of Co-operative dues was extended upto 31-3-1981 in case of small and marginal farmers.

10. All takavi loans of small and marginal farmers owing not more than 2 Hectares are waived.

11. Pattas will be granted to tenants who have been granted lands under the Land Reforms Act even without payment of the first instalment of the occupancy rights.

12. Government has agreed to pay Land acquisition Compensation in all cases coming under irrigation projects and works where-

(a) final award have been passed but Compensation has not been paid.

(b) the Final notification under section 6 (1) of the Act has been published but 80% of the Compensation has not been paid.

13. Government has already passed orders for the repair of irrigation channals and Atchcut Roads.

14. The s alestax on fertilizer has been reduced from 3% to 2%

15. The seed loans granted to the small and marginal farmers during scarcity year 1970 has been waived.

16: Government has ordered to implement crop insurance scheme throughout the State in a phased manner.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ರೈತರ ಚಳುವಳಿಗಳು ನಡೆಯುತ್ತಲೇ ಇವೆ. ಸರ್ಕಾರದವರನ್ನು ನೋಡಿದರೆ ನಾವು ರೈತರ ೧೯ ಬೇಡಿಕೆಗಳನ್ನು ಈಡೇರಿಸಿದ್ದೇವೆಂದು ಹೇಳುತ್ತಿದ್ದಾರೆ. ದೇವರು ವರ ಕೊಟ್ಟರೂ ಪೂಜಾರಿ ಕೊಡ ಎಂಬಂತಾಗಿದೆ ರೈತರ ಬೇಡಿಕೆಗಳೆಲ್ಲವನ್ನೂ ಈಡೇರಿಸಿದ್ದೀರಾ ಅಥವಾ ಇನ್ನೂ ಏನಾದರೂ ಬಾಕಿ ಉಳಿದಿವೆಯೆ ಏಕೆಂದರೆ ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲ ಎಂದು ರೈತರು ಇನ್ನೂ ಹೇಳುತ್ತಲೇ ಇದ್ದಾರೆ.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಮುಖ್ಯ ಮಂತ್ರಿಗಳ ಪರವಾಗಿ).—ಅಂಥ ನಿದರ್ಶನಗಳಾವುವೂ ಇನ್ನೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ತಾವು ಸರ್ಕಾರದ ವತಿಯಿಂದ ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ಕಳುಹಿಸಿ ನೆಗೋಸಿಯೇಷನ್ ಮಾಡಿಸಿದಾಗಿದೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧಿಕಾರಿಗಳು ಹೋಗಿ ಪಂಚಾಯಿತಿಗೆ ಮಾಡಿ ಬಂದಿದ್ದಾರೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಅದರ ಪರಿಣಾಮ ಏನಾಗಿದೆ ಎಂಬುದನ್ನು ಹೇಳುತ್ತೀರಾ

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದರ ಪರಿಣಾಮ ಏನೇನು ಆಗಿದೆ ಎಂಬುದನ್ನೆಲ್ಲಾ ನಮ್ಮ ಉತ್ತರದಲ್ಲಿ (ಅನೆಕ್ಸ್ಚರ್ ೧ರಲ್ಲಿ) ಹೇಳಿದ್ದೇವೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.— ನಿಮ್ಮ ಅಡಿಷನಲ್ ಚೀಫ್ ಸೆಕ್ರೆಟರಿಯವರು ಅಲ್ಲಿಗೆ ಹೋಗಿ ಬಂದ ಮೇಲೆ ತಾವು ಯಾವ ತೀರ್ಮಾನಕ್ಕೆ ಬಂದಿರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ದಿವಸ ಚರ್ಚೆ ಮಾಡಿ ಅವರನ್ನು ಕಳುಹಿಸಿ ಬಂದಿದ್ದಾರೆ. ಇನ್ನೂ ನಾವು ಯಾವ ತೀರ್ಮಾನಕ್ಕೂ ಬಂದಿಲ್ಲ. ಸರ್ಕಾರ ಇದನ್ನು ಪರಿಶೀಲಿಸುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—ಇಲ್ಲಿ ಪ್ರಶ್ನೆಯನ್ನು ಕೇಳಿರುವವರು ಸರ್ಕಾರ ರೈತರಿಗೆ ಏನು ಸಹಾಯ ಮಾಡಿದೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ಆದರೆ ನೀವು ಹೇಳುವುದನ್ನು ನೋಡಿದರೆ, ತಾವು ಆ ರೈತರಿಗೆ ಏನೂ ಸಹಾಯವನ್ನೇ ಮಾಡಿಲ್ಲವೆಂದು ನಾನು ಅಂದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಅನೆಕ್ಸ್ಚರ್ ೧ ರಲ್ಲಿ ಎಲ್ಲ ವಿವರಗಳೂ ಇವೆ. ದಯವಿಟ್ಟು ನೋಡಿ.

ಶ್ರೀ ಜೆ. ಹೆಚ್. ಪಟೇಲ್.—ಇತ್ತೀಚೆಗೆ ಸರ್ಕಾರದ ಅಡಿಷನಲ್ ಚೀಫ್ ಸೆಕ್ರೆಟರಿಯವರು ಶಿವಮೊಗ್ಗಾಕ್ಕೆ ಹೋಗಿ ಅಲ್ಲಿನ ರೈತ ಮುಖಂಡರೊಡನೆ ಮಾತುಕತೆ ಮಾಡಿ ಮುಖ್ಯವಾದ ೩ ಬೇಡಿಕೆಗಳನ್ನೂ ಈಡೇರಿಸುತ್ತೇವೆಂದು ಹೇಳಿಬಂದಿದ್ದರು. ಇವತ್ತು ಆ ಮೂರು ಬೇಡಿಕೆಗಳನ್ನೂ ಈಡೇರಿಸಿದ್ದಾರೆಯೆ? ಇದು ಹಣಕಾಸಿಗೆ ಸಂಬಂಧಪಟ್ಟದ್ದಲ್ಲ. ಇದು ರೈತರ ಚಳುವಳಿಗೆ ಸಂಬಂಧಪಟ್ಟಿದ್ದು. ಅವತ್ತಿನ ದಿವಸ ಅಡಿಷನಲ್ ಚೀಫ್ ಸೆಕ್ರೆಟರಿಯವರು ಆಶ್ವಾಸನೆಯನ್ನು ಕೊಟ್ಟು ಬಂದಿದ್ದರು. ಅದು ಏನಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆವತ್ತಿನ ದಿವಸ ಅಡಿಷನಲ್ ಚೀಫ್ ಸೆಕ್ರೆಟರಿಯವರು ಅಲ್ಲಿಗೆ ಹೋಗಿದ್ದಾಗ ಏನೇನು ಸಂಭಾಷಣೆ ನಡೆದಿದೆ ಎಂಬುದನ್ನು ಸರ್ಕಾರ ಪರಿಶೀಲಿಸುತ್ತದೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ಕಳೆದ ೨ ವರ್ಷದಿಂದಲೂ ಈ ರೈತರ ಚಳುವಳಿ ನಡೆಯುತ್ತಲೇ ಇದೆ. ನಾವು ಪರಿಶೀಲಿಸುತ್ತೇವೆಂದು ತಾವು ಹೇಳುತ್ತಿದ್ದೀರಿ. ಹಾಗಾದರೆ ಇನ್ನು ಎಷ್ಟು ದಿವಸದಲ್ಲಿ ಇದನ್ನು ಪರಿಶೀಲಿಸುತ್ತೀರಿ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅವರ ಬೇಡಿಕೆಗಳಲ್ಲಿ ಮುಖ್ಯವಾದ ಯಾವ ಯಾವ ಬೇಡಿಕೆ ಅಳನ್ನು ಕೊಟ್ಟಿದ್ದರು ಅದನ್ನು ಪರಿಶೀಲಿಸಿದೆ, ಅನೆಕ್ಸ್ಚರ್ (೧)ರಲ್ಲಿ ಅದನ್ನೆಲ್ಲಾ ಕೊಟ್ಟಿದೆ. ಇಷ್ಟೇ ಗಲ್ಲದೆ ಇನ್ನೂ ಏನೇನು ಆಗಬೇಕಾಗಿದೆ ಅದರ ಬಗ್ಗೆ ಅಡಿಷನಲ್ ಚೀಫ್ ಸೆಕ್ರೆಟರಿಯವರು ಏನೇನು ಮಾತುಕತೆ ನಡೆಸಿ ಬಂದಿದ್ದಾರೆ ಅದನ್ನೆಲ್ಲಾ ಸರ್ಕಾರ ನೋಡಿ ಪರಿಶೀಲಿಸುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಚಳುವಳಿ ನಡೆಯುತ್ತಿದೆ. ಅದು ಉಗ್ರ ರೂಪ ತಾಳುವ ಸಂದರ್ಭದಲ್ಲಿ ಸರ್ಕಾರದ ಅಡಿಷನಲ್ ಚೀಫ್ ಸೆಕ್ರೆಟರಿಯವರನ್ನು ತಾವು ಕಳುಹಿಸಿದ್ದಿರಿ. ಅವರು ಹೋಗಿ ಏನೇನೋ ಮಾತನಾಡಿಕೊಂಡು ಬಂದಿದ್ದಾರೆ. ಅವರು ಪ್ರಾಮಿಸ್ ಮಾಡಿ ಬಂದ ಮೇಲೂ ಇನ್ನೂ ಅದನ್ನು ಪರಿಶೀಲಿಸುತ್ತೇವೆ ಎಂದು ತಾವು ಹೇಳುತ್ತಿದ್ದೀರಿ.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ. ಅಡಿಷನಲ್ ಚೀಫ್ ಸೆಕ್ರೆಟರಿಯವರು ಹೋಗಿ ರೈತ ಮುಖಂಡರ ಹತ್ತಿರ ಮಾತನಾಡಿಕೊಂಡು ಬಂದಿದ್ದಾರೆ. ಆ ವಿಚಾರವನ್ನು ನಾವು ಪರಿಶೀಲಿಸುತ್ತೇವೆ.

ಶ್ರೀ ಹೆಚ್ ಎಲ್ ತಿಮ್ಮೇಗೌಡ.—ಪರಿಶೀಲಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಇನ್ನು ಎಷ್ಟು ದಿನಸದಲ್ಲಿ ಪರಿಶೀಲಿಸುತ್ತೀರಿ ಎಂಬುದನ್ನು ಹೇಳುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆದಷ್ಟು ಬೇಗ ಪರಿಶೀಲಿಸುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಸರ್ಕಾರದವರು ಕರ್ನಾಟಕದ ರೈತರಿಗೆ ಸುಮಾರು ೮ ಕೋಟಿ ರೂಪಾಯಿಗಳ ರಿಯಾಯಿತಿಯನ್ನು ನೀಡಿರುವುದು ನಿಜವೆ? ಎಂದು ಕೇಳಿರುವುದಕ್ಕೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಯಾವ ರೀತಿ ರಿಯಾಯಿತಿಯನ್ನು ಕೊಟ್ಟಿದ್ದೀರೆಂಬುದನ್ನು ಹೇಳುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದು ೮ ಕೋಟಿ ಆಲ್ಲ. ನಾವು ರೈತರಿಗೆ ಕೊಟ್ಟಿರತಕ್ಕದ್ದು ೮೦ ಕೋಟಿ ರೂ ಗಳ ರಿಯಾಯಿತಿ ದಯವಿಟ್ಟು ೮ ಕೋಟಿ ಎಂದು ಇರುವುದನ್ನು ೮೦ ಕೋಟಿ ಎಂದು ಮಾಡಿಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಹೋಗಲಿ ತಮ್ಮ ಉತ್ತರದಲ್ಲಿ ಹೇಳಿರುವಂತೆ ೮ ಕೋಟಿ ರೂಪಾಯಿ ಗಳಿಗೆ ವಿವರಗಳನ್ನು ಕೊಡಿ.

ಅಧ್ಯಕ್ಷರು.—ಅನೆಕ್ಷ್ಚರ್‌ನಲ್ಲೇ ಹೇಳಿದೆ, ದಯವಿಟ್ಟು ಹೇಳಿ ನೋಡಿ. ಸಪ್ಲೋರ್ಟ್ ಪ್ರೈಸ್ ಕೊಟ್ಟಿದ್ದಾರೆ, ಹಾಗೂ ಇನ್ನೂ ಮುಂತಾದುವಕ್ಕೆ ಕೊಟ್ಟಿರುವುದು ವಿವರ ಅದರಲ್ಲಿದೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಕಳೆದ ಸಾರಿ ತಾವು ಯಾವುಯಾವುದಕ್ಕೆ ರಿಯಾಯಿತಿ ಯನ್ನು ಕೊಟ್ಟಿದ್ದೀವೆಂದು ಹೇಳಿದ್ದೀರಿ ಅದನ್ನೆಲ್ಲಾ ಲೆಕ್ಕಾ ಹಾಕಿದಾಗ ಅತಿ ಹೆಚ್ಚು ಎಂದರೆ ೨–೩ ಕೋಟಿ ರೂಪಾಯಿಗಿಂತಲೂ ಹೆಚ್ಚಿಗೆ ಆಗುವುದಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ನಾವು ತಂದಿದ್ದೇವೆ. ಇನ್ನೊಂದು ವಿಚಾರ ಎಂದರೆ, ಐದೂವರೆ ಲಕ್ಷ ಆರ್ಜಿ ಪೈಕಿ ೧೨ ಸಾವಿರ ಆರ್ಜಿಗಳಿಗೆ ೭೬ ಲಕ್ಷ ರೂಪಾಯಿಗಳ ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹಿಂದೆ ನಾನು ಕೇಳಿದ್ದ ಒಂದು ಪ್ರಶ್ನೆಗೆ ಉತ್ತರ ಹೇಳಿದ್ದೀರಿ. ಈಗ ತಾವು ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗದಿದ್ದರೆ, ಇನ್ನೊಂದು ದಿವಸ ವಾದರೂ ಈ ೮೦ ಕೋಟಿ ರಿಯಾಯಿತಿಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ಕೊಡುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸರ್ಕಾರದ ವತಿಯಿಂದ ವಿವರಗಳನ್ನು ಕೊಡುತ್ತೇವೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ. ಈಗ ಕರ್ನಾಟಕ ರೈತರ ಬೇಡಿಕೆಗಳನ್ನು ಈಡೇರಿಸಿದ್ದೇವೆಂದು ತಾವು ಹೇಳುತ್ತಿದ್ದೀರಿ. ಬಿಜಾಪುರದಲ್ಲಿ ಸೋಮಯ್ಯ ಷುಗರ್ ಫ್ಯಾಕ್ಟರಿಯವರು ಕಳೆದ ಮೇ ತಿಂಗಳ ಕಡೆಯವರೆಗೂ ಕಬ್ಬನ್ನು ತೆಗೆದುಕೊಂಡಿದ್ದು ನಂತರ ೧೪೮ ರೂ ಪ್ರಕಾರ ಬೇರೆ ಬರೆಸಿಕೊಂಡು ರೈತರಿಗೆ ಅನ್ಯಾಯ ಮಾಡಿದ್ದಾರೆ. ಈಗ ಆ ಫ್ಯಾಕ್ಟರಿ ಬಾಂದ್ ಆಗಿದೆ ಆದ್ದರಿಂದ ಹಿಂದೆ ಏನು ೨೧೦ ರೂ ಪ್ರಕಾರ ಹಣವನ್ನು ಕೊಡುತ್ತಿದ್ದರು, ಆದೇ ದರದಲ್ಲಿ ಕೊಡಿಸಲು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಆಕಸ್ಮಾತ್ ಮಾನ್ಯ ಪಂಪಾಪತಿಯವರ ಗಮನಕ್ಕೆ ಈ ವಿಷಯ ಬಂದಿದ್ದರೂ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ ಚುನಾವಣೆಗಳು ಸಮೀಪಿಸುತ್ತಿರುತ್ತವೆ. ಆರು ತಿಂಗಳಿಂದಲೂ ಸರ್ಕಾರದವರು ಪರಿಶೀಲನೆ ಮಾಡುತ್ತೇವೆ. ಪರಿಶೀಲನೆ ಮಾಡುತ್ತೇವೆಂದು ಹೇಳಿ

ಕೊಂಡೇ ಬಂದಿರುತ್ತಾರೆ. ಮುಂದೆ ನಾವು ಚುನಾವಣೆಗೆ ಹೋಗಬೇಕಾಗಿರುತ್ತದೆ ರೈತರು ನಮ್ಮನ್ನೇ ಪರಿಶೀಲನೆ ಮಾಡಿಬಿಡುತ್ತಾರೆ. ಆದ್ದರಿಂದ ದಯವಿಟ್ಟು ಏಷ್ಟು ದಿವಸಗಳಲ್ಲಿ ಪರಿಹಾರವನ್ನು ಕೊಡುತ್ತೀರಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಚಂದ್ರಶೇಖರಯ್ಯನವರಿಗೆ ಬಯವಾದರೆ ಅದಕ್ಕೆ ನಾನು ಏನು ಮಾಡಬೇಕೋ ಗೊತ್ತಿಲ್ಲ.

ಶ್ರೀ ಶೀರ್ವಾಳಿ ಚಿಂದ್ರಶೇಖರ್. —ಖಚಿತವಾಗಿ ಇಂಥ ದಿವಸ ಬಗೆಹರಿಸುತ್ತೇವೆಂದು ಹೇಳಲು ಸಾಧ್ಯವಾಗುವುದಿಲ್ಲವೇ?

ಅಧ್ಯಕ್ಷರು.—ಡಿ ನಲ್ಲಿ ಉತ್ತರ ಹೇಳಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾವು ಈಗ ಏನು ರಿಯಾಯಿತಿಯನ್ನು ಕೊಟ್ಟಿರುತ್ತೇವೆ ಅದನ್ನು ಹೇಳಿದರೆ ಸಾಕು ನಿಮಗೆ ಓಟನ್ನು ಕೊಡುತ್ತಾರೆ. ಇನ್ನು ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ.

ಶ್ರೀ ಪಿ. ರಾಮದೇವ್.—ಶ್ರೀಮಾನ್ ಚಂದ್ರಶೇಖರ್‌ರವರಿಗೆ ಏತಕ್ಕೆ ಭಯ?

ಶ್ರೀ ಎಚ್. ವಲ್. ತಿಮ್ಮೇಗೌಡ.—ಮಾನ್ಯ ಸಚಿವರು ೮೦ ಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಕೊಟ್ಟಿದ್ದೇವೆಂದು ಹೇಳಿರುತ್ತಾರೆ. ಅದಕ್ಕೆಲ್ಲ ವಿವರಗಳನ್ನು ಕೊಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎಲ್ಲದಕ್ಕೂ ಸಂಬಂಧಪಟ್ಟವರಿಂದ ವಿವರಗಳನ್ನು ತರಿಸಿ ಓದಗಿಸಿ ಕೊಡುತ್ತೇನೆ.

Re-organisation of Co-operative Societies in the State

779. SRI M. C. BASAPPA (Chamarajanagar)—Will the Minister for Co-operation be pleased to state:

(a) whether it has come to the notice of the Government that reorganisation of Societies in the State has caused lot of inconvenience to the very growth of Co-operative movement in the State;

(b) If so, the steps Government proposes to take to set right the defects?

SRI H. C. SRIKANTAIAH (Minister of Co-operation).—

(a) No.

(b) Does not arise.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ನನ್ನ ಆ ಪ್ರಶ್ನೆಗೆ ರಾಜ್ಯದಲ್ಲಿ ಸಹಕಾರ ಸಂಘಗಳ ಪುನರ್ ವ್ಯವಸ್ಥೆಯು ರಾಜ್ಯದಲ್ಲಿ ಸಹಕಾರ ಆಂದೋಲನದ ಬೆಳವಣಿಗೆಗೆ ಬಹಳ ಅನಾನುಕೂಲಗಳನ್ನುಂಟು ಮಾಡಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರುವುದೆ ಎಂದು ಕೇಳಿರುವುದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿರುತ್ತಾರೆ. ಅನಾನುಕೂಲ ಆಗಿಲ್ಲವೋ ಅಥವಾ ಸರ್ಕಾರದ ಗಮನಕ್ಕೆ ಬಂದಿಲ್ಲವೋ ಎಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಂಥ ಅನಾನುಕೂಲ ಆಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ರೀ ಆರ್ಗನೈಸೇಷನ್ ಆಗಿರತಕ್ಕಂಥ ಪ್ರದೇಶಗಳಲ್ಲಿ ಇರತಕ್ಕಂಥ ಅನೇಕ ಸಹಕಾರಿ ಸಂಘಗಳಿಗೆ ತೊಂದರೆಯುಂಟಾಗಿದೆ. ಪಂಚಾಯಿತಿಗೆ ಒಂದು ಸಹಕಾರಿ ಇರತಕ್ಕಂಥದು ಅಗತ್ಯವೆಂದು ಸರ್ಕಾರಕ್ಕೆ ಮಾನವಿಪತ್ರ ಸಲ್ಲಿಸಿಲ್ಲವೇ ಸ್ವಾಮಿ,